# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್–820/2014/ಡಿಆರ್‌ಇ–1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ: 2/1/2019

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀ.ದೇವರಾಜು, ಅಧ್ಯಕ್ಷರು, ಕಾಮನದುರ್ಗ ಗ್ರಾಮಪಂಚಾಯಿತಿ, ತರೀಕೆರೆ ತಾಲ್ಲೂಕು, ಮತ್ತು (2) ಶ್ರೀಮತಿ.ದಿವ್ಯ ಜ್ಯೋತಿ ಬಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಾಮನದುರ್ಗ ಗ್ರಾಮಪಂಚಾಯಿತಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, – ಇವರ ವಿರುದ್ಧದ ನಡವಳಿ ಕುರಿತು.

******

1. ಶ್ರೀ.ರಾಜು ಹೆಚ್, ಬಿನ್ ಹನುಮನಾಯ್ಕ, ಸಾಂತವೇರಿ ಅಂಚೆ, ತರೀಕೆರ್ಫೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ.ದೇವರಾಜು, ಅಧ್ಯಕ್ಷರು, ಕಾಮನದುರ್ಗ ಗ್ರಾಮಪಂಚಾಯಿತಿ, ತರೀಕೆರೆ ತಾಲ್ಲೂಕು, ಮತ್ತು (2) ಶ್ರೀಮತಿ.ದಿವ್ಯ ಜ್ಯೋತಿ ಬಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಾಮನದುರ್ಗ ಗ್ರಾಮಪಂಚಾಯಿತಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ತರಿಕೆರೆ ತಾಲ್ಲೂಕಿನ ಸಂತವೇರಿ ಗ್ರಾಮದಲ್ಲಿ 2012–13ನೇ ಸಾಲಿನಲ್ಲಿ ಹಲವಾರು ಅಭಿವೃದ್ಧ ಕಾರ್ಯಗಳು ನಡೆದಿದ್ದು, ಕಾಮಗಾರಿಗಳು ಕಳಪೆಯಾಗಿರುತ್ತವೆ. ಗ್ರಾಮಪಂಚಾಯಿತಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಗ್ರಾಮದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡದೆ, ಸಾರ್ವಜನಿಕರ ಹಿತಾಸಕ್ತಿ ಕಾಪಾಡದೆ, ಕಳಪೆ ಕಾಮಗಾರಿಯನ್ನು ನಡೆಸಿ ಗ್ರಾಮದ ಅವ್ಯವಸ್ಥೆಗೆ ಕಾರಣರಾಗಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರು ತಮ್ಮ ದೂರಿನ ಜೊತೆ ಹಾಜರು ಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ಓಂಬಡ್ಸ್‌ಮನ್ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಕು:ದಿವ್ಯಜ್ಯೋತಿ ಮತ್ತು ಪಂಚಾಯತ್ ಅಧ್ಯಕ್ಷರಾದ ದೇವರಾಜ್‌ರವರು ಸಮವಾಗಿ ದುರುಪಯೋಗವಾಗಿರುವ ಸರ್ಕಾರದ ಹಣ ರೂ.20,200/– ಗಳನ್ನು

ಪಂಚಾಯತ್ ರಾಜ್ ಇಲಾಖೆಗೆ ಕಳುಹಿಸಿಕೊಡತಕ್ಕದ್ದು ಎಂದು ಆದೇಶಿಸಿದ್ದು ಮತ್ತು ಅದೇರೀತಿ ಯೋಜನೆಯ ಅನುಷ್ಠಾನ ಮತ್ತು ಹಣ ಬಳಕೆಯ ಬಗ್ಗೆ ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಎತ್ತಿ ಹಿಡಿಯದೆ ಇರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿ ದಿವ್ಯಜ್ಯೋತಿ, ಕಿರಿಯ ಇಂಜಿನಿಯರ್ ಹರೀಶ್ ಮತ್ತು ಪಂಚಾಯತ್ ಅಧ್ಯಕ್ಷರಾದ ದೇವರಾಜ್ ಇವರಿಗೆ ದಂಡ ವಿಧಿಸಿರುವುದು ಕಂಡುಬರುತ್ತದೆ. ಸದರಿ ಅಂಶವನ್ನು ಗಮನಿಸಿದಾಗ, ಎದುರುದಾರರು ಹಣ ದುರುಪಯೋಗ ಮಾಡಿರುವುದು ಮತ್ತು ಕೆಲವು ಅವ್ಯವಹಾರಗಳಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದ ಕಾರಣ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ಇವರಿಗೆ ಆದೇಶಿಸಲಾಗಿತ್ತು.

4. ಪೊಲೀಸ್ ಉಪಾಧೀಕ್ಷಕರು (ಪ್ರಭಾರ), ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ವಿಭಾಗ ಇವರು ವರದಿಯನ್ನು ಸಲ್ಲಿಸಿದ್ದು, ಈ ಕೆಳಗಿನಂತೆ ಅಭಿಪ್ರಾಯವನ್ನು ನೀಡಿರುತ್ತಾರೆ.

> "ಸದರಿ ಅರ್ಜಿಯನ್ನು ವಿಚಾರಣೆ ಮಾಡಲಾಗಿ ತಿಳಿದುಬಂದ ಅಂಶವೇನೆಂದರೆ, ತರೀಕೆರೆ ತಾಲ್ಲೂಕಿನ ಸಾಂತವೇರಿ ಗ್ರಾಮದಲ್ಲಿ 2012-13 ನೇ ಸಾಲಿನಲ್ಲಿ ಸಾಂತವೇರಿ ಗ್ರಾಮದಲ್ಲಿ ಸಂತೆಕಟ್ಟೆ ನಿರ್ಮಾಣ ಕಾಮಗಾರಿಗೆ ಕಂಟ್ರಾಕ್ಟರ್‌ರವರು ರೂ.32342/- ಗಳ ಎಸ್ಟಿಮೇಟ್ ನೀಡಿದ್ದು, ಗ್ರಾಮ ಪಂಚಾಯಿತಿ ಅಧಿಕಾರಿಗಳು ರೂ.34,991/- ಗಳನ್ನು ಖರ್ಚು ಮಾಡಿರುವುದು ಕಂಡುಬಂದಿರುತ್ತದೆ. ಗ್ರಾಮಪಂಚಾಯಿತಿಯ ಅಧಿಕಾರಿಗಳು ಎಸ್ಟಿಮೇಟ್‌ಗಿಂತ ಹೆಚ್ಚಿನ ಹಣ ಉಪಯೋಗಿಸಿ ಕಾಮಗಾರಿ ನಡೆಸಿದ್ದು, ಕಾಮಗಾರಿಯಲ್ಲಿ ಕಳಪೆ ಕಾಮಗಾರಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಸಾಂತವೇರಿ ಗ್ರಾಮದ ದೋಬಿ ಹಳ್ಳದ ಕೆರೆಯ ರಿವಿಟ್‌ಮೆಂಟ್ ಹಾಗೂ ಅಭಿವೃದ್ಧಿ ಕಾಮಗಾರಿಯ ರಿವಿಟ್‌ಮೆಂಟ್ 2.5 ಮೀಟರ್ ಎತ್ತರವಿದ್ದು, ಈ ಕಾಮಗಾರಿಗೆ ರೂ.1,27,875/- ಹಣ ಉಪಯೋಗಿಸಿದ್ದು, ಎನ್‌ಎಂಆರ್ ಪರಿಶೀಲಿಸಲಾಗಿ ರೂ.35,191/- ಗಳ ವ್ಯತ್ಯಾಸ ಕಂಡುಬಂದಿರುತ್ತದೆ. ಸಾಂತವೇರಿ ಬೈಪಾಸ್ ರಸ್ತೆಯ ಪಕ್ಕದಲ್ಲಿರುವ ಉದ್ಯಾನವನದಲ್ಲಿ ನೀರು ಕಾಲುವೆ ನಿರ್ಮಾಣ ಕಾಮಗಾರಿಗೆ ರೂ.1,44,983/- ಖರ್ಚಾಗಿದ್ದು, ರೂ.10,602/- ವ್ಯತ್ಯಾಸ ಕಂಡುಬಂದಿರುತ್ತದೆ. ಸಾಂತವೇರಿ ಗ್ರಾಮದಲ್ಲಿ ಮಳೆಗಾಲದಲ್ಲಿ ಕೃಷಿ ಅರಣ್ಯ ವಿಸ್ತರಣೆ ಸಹಿ ಬೆಳೆಸುವ ಕಾಮಗಾರಿಗೆ ರೂ.26,875/- ಗಳು ಖರ್ಚಾಗಿದ್ದು, ಎಂ.ಬಿ.ಪುಸ್ತಕದಲ್ಲಿ ರೂ.41,148/- ಖರ್ಚಾಗಿರುವುದು ಕಂಡುಬಂದಿರುತ್ತದೆ. ರೂ.5,727/- ಗಳನ್ನು ಹೆಚ್ಚಿಗೆ ಪಾವತಿಸಿರುವುದು ದಾಖಲೆಗಳಿಂದ ಕಂಡುಬಂದಿರುತ್ತದೆ. ಸಾಂತವೇರಿ ಗ್ರಾಮದ ಆರೋಗ್ಯ ಕೇಂದ್ರ ಹಾಗೂ ಅಂಗನವಾಡಿ ಕೇಂದ್ರದ ಹತ್ತಿರ ಸಮುದಾಯ ಅರಣ್ಯೀಕರಣ ಕಾಮಗಾರಿಗೆ ರೂ.55,000/- ಗಳ ಎಸ್ಟಿಮೇಟ್ ನೀಡಿದ್ದು,

ಎನ್.ಎಂ.ಆರ್.ಪುಸ್ತಕದಲ್ಲಿ ರೂ.52,700/- ಖರ್ಚಾಗಿದೆಯೆಂದು ನಮೂದಾಗಿದ್ದು, ಎಂ.ಬಿ.ಪುಸ್ತಕದಲ್ಲಿ ರೂ.45,750/- ಎಂದು ನಮೂದಾಗಿದ್ದು, ಅರಣ್ಯೀಕರಣ ಕಳಪೆ ಕಾಮಗಾರಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಸಾಂತವೇರಿ-ಚಿಕ್ಕಮಗಳೂರು ರಸ್ತೆಯ ಚೌಕದಲ್ಲಿರುವ ಉದ್ಯಾನವನ ಹಿಂದೂ ಸ್ಮಶಾನದಲ್ಲಿ ಸಮುದಾಯ ಅರಣ್ಯೀಕರಣ ಕಾಮಗಾರಿಗೆ ರೂ.21,885/- ಗಳು ಖರ್ಚಾಗಿದ್ದು, ಓಚರ್‌ನಲ್ಲಿ ರೂ.26,920/- ಗಳನ್ನು ಖರ್ಚು ಮಾಡಿರುವುದದಾಗಿ ನಮೂದಾಗಿರುತ್ತದೆ ಹಾಗೂ ಸದರಿ ಕಾಮಗಾರಿಯು ಕಳಪೆ ಕಾಮಗಾರಿಯಾಗಿರುವುದು ಕಂಡುಬಂದಿರುತ್ತದೆ. ಸದರಿ ಕಾಮಗಾರಿಗೆ ರೂ.5,035/- ಗಳನ್ನು ಹೆಚ್ಚಿಗೆ ಬಳಸಿರುವುದು ಕಂಡುಬಂದಿರುತ್ತದೆ. ಪಾರ್ವತಮ್ಮನ ಮನೆಯಿಂದ ಎಸ್ಟೇಟ್ ಬೇಲಿವರೆಗೆ ಪೈಪ್‌ಲೈನ್ ಅಳವಡಿಸುವ ಕಾಮಗಾರಿಯು 98 ಮೀ.ಉದ್ದವಿದ್ದು, ಸದರಿ ಕಾಮಗಾರಿಗೆ ಇಂಜಿನಿಯರ್‌ರವರು ರೂ.15,000/- ಎಸ್ಟಿಮೇಟ್ ನೀಡಿದ್ದು, ರೂ.14,850/- ಖರ್ಚಾಗಿರುವುದು ದಾಖಲಾತಿಗಳಿಂದ ಕಂಡುಬಂದಿರುತ್ತದೆ. ವರ್ಕ್‌ಶಾಪ್‌ನಿಂದ ಮುಂಜು ಮನೆಯವರೆಗೆ ಪೈಪ್‌ಲೈನ್ ನಿರ್ಮಾಣ ಕಾಮಗಾರಿಗೆ ಇಂಜಿನಿಯರ್‌ರವರು ರೂ.60,000/- ಎಸ್ಟಿಮೇಟ್ ನೀಡಿದ್ದು, ರೂ.59,942/- ಗಳು ಕಾಮಗಾರಿಗೆ ಖರ್ಚಾಗಿರುವುದು ದಾಖಲಾತಿಗಳಿಂದ ಕಂಡುಬಂದಿರುತ್ತದೆ. 2010ನೇ ಮಳೆಗಾಲದಲ್ಲಿ ಕೃಷು ಅರಣ್ಯ ವಿಸ್ತರಣೆ ಸಸಿ ಬೆಳೆಸುವ ಕಾಮಗಾರಿಗೆ ತರೀಕೆರೆ ಎಸ್.ಎಫ್.ರವರು ರೂ.1,87,246/- ಗಳ ಎಸ್ಟಿಮೇಟ್ ನೀಡಿದ್ದು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ರೂ.2,98,500/- ಗಳು ಖರ್ಚು ಮಾಡಿರುವುದು ದಾಖಲಾತಿಗಳಿಂದ ಕಂಡುಬಂದಿರುತ್ತದೆ. ವರ್ಕ್‌ಶಾಪ್‌ನಿಂದ ಮಂಜು ಮನೆವರೆಗೆ ಪೈಪ್‌ಲೈನ್ ಹಾಗೂ ಸಿಸ್ಟನ್ ಅಳವಡಿಸುವ ಕಾಮಗಾರಿಗೆ ಕಾಮನದುರ್ಗ ಗ್ರಾಮಪಂಚಾಯಿತಿಯ 2011-12ನೇ ಸಾಲಿನ ಪಿ.ಆರ್.ಇ. ಗ್ರಾಮೀಣ ನೀರು ಸರಬರಾಜು ಇಲಾಖಾ ದರಪಟ್ಟಿಯಂತೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಇಂಜಿನಿಯರ್‌ರವರು ಅಂದಾಜು ಮೊತ್ತ ರೂ.65,000/- ಗಳೆಂದು ಎಸ್ಟಿಮೇಟ್ ನೀಡಿದ್ದು, ಸದರಿ ಕಾಮಗಾರಿಗೆ ರೂ.65,000/- ಖರ್ಚಾಗಿರುವುದಾಗಿ ದಾಖಲಾತಿಗಳಿಂದ ಕಂಡುಬಂದಿರುತ್ತದೆ. ಅಂಬೇಡ್ಕರ್ ನಗರಕ್ಕೆ ವಿದ್ಯುತ್ ಸಂಪರ್ಕ ಕಾಮಗಾರಿಗೆ ರೂ.41,913/- ಖರ್ಚಾಗಿದ್ದು, ವಿದ್ಯುತ್ ಸಂಪರ್ಕ ಕಲ್ಪಿಸಿರುವುದು ಕಂಡುಬಂದಿರುತ್ತದೆ.

ಸಾಂತವೇರಿ ಗ್ರಾಮದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿ.ಡಿ.ಓ) ಕು:ದಿವ್ಯಜ್ಯೋತಿ ಮತ್ತು ಪಂಚಾಯಿತಿ ಅಧ್ಯಕ್ಷರಾದ ಶ್ರೀ:ದೇವರಾಜ್‌ರವರು ಸೇರಿಕೊಂಡು ಮೇಲ್ಕಂಡ ಕೆಲವೊಂದು ಕಾಮಗಾರಿಗಳು ಕಳಪೆ ಕಾಮಗಾರಿಯಾಗಿದ್ದು, ಕೆಲವೊಂದು ಕಾಮಗಾರಿಗಳಿಗೆ ಎಸ್ಟಿಮೇಟ್‌ಗಿಂತ ಹೆಚ್ಚು

ಖರ್ಚು ಮಾಡಿರುವುದು ಸ್ಥಳ ಮತ್ತು ದಾಖಲಾತಿಗಳ ಪರಿಶೀಲನೆಯಿಂದ ಕಂಡುಬಂದಿರುತ್ತದೆ" ಎಂದು ಅಭಿಪ್ರಾಯ ನೀಡಿರುತ್ತಾರೆ.

5. ತನಿಖಾಧಿಕಾರಿಯ ವರದಿಯ ಮೇಲೆ ಆಕ್ಷೇಪಣೆ ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು.

6. 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಎಸ್ಟಿಮೇಟ್ ಮೊತ್ತಕ್ಕಿಂತ ಹೆಚ್ಚಿಗೆ ಹಣ ಖರ್ಚು ಮಾಡಿರುವುದಿಲ್ಲ. ತಾಂತ್ರಿಕವಾಗಿ ಕಾಮಗಾರಿಯ ಗುಣಮಟ್ಟವನ್ನು ಪರೀಕ್ಷಿಸಿ ಕಿರಿಯ ಅಭಿಯಂತರರು ಬಿಲ್ಲು ದಾಖಲಿಸಿದ್ದು, ಅದರಂತೆ ಕಾಮಗಾರಿಗಳಿಗೆ ಹಣ ಪಾವತಿ ಮಾಡಲಾಗಿದೆ ಮತ್ತು ಕಾಮಗಾರಿಯು ಕಳಪೆಯಾಗಿರುವುದಿಲ್ಲವೆಂದು ಹೇಳಿರುತ್ತಾರೆ. ಮುಂದುವರೆದು, ತಮ್ಮ ಆಕ್ಷೇಪಣೆಯಲ್ಲಿ ಸಂತವೇರಿ ಗ್ರಾಮದಲ್ಲಿ ಸಂತೆಕಟ್ಟೆ ನಿರ್ಮಾಣಕ್ಕೆ ರೂ.35,000/– ಅಂದಾಜು ಪಟ್ಟಿಯಿದ್ದು, ಬಿಲ್ ಮೊತ್ತ ರೂ.34,991/– ಇದ್ದು, ರೂ.2,649/– ಮೊತ್ತದ ಉಪಕರಗಳನ್ನು ಕಟಾಯಿಸಿ ರೂ.32,342/– ಪಾವತಿಸಲಾಗಿದೆ. ಕಳಪೆ ಕಾಮಗಾರಿಯಾಗಿರುವುದಿಲ್ಲ. ದೋಬಿಹಳ್ಳ ಕೆರೆಯ ರಿವಿಟ್‌ಮೆಂಟ್ ಕಾಮಗಾರಿಯು ರೂ.2 ಲಕ್ಷಗಳಿಗೆ ಅಂದಾಜು ಪಟ್ಟಿಯಿದ್ದು, ಕೂಲಿ ಮೊತ್ತ ರೂ.1.41,195/–, ಸಾಮಾಗ್ರಿ ಮೊತ್ತ ರೂ.24,037/– ಒಟ್ಟು ಮೊತ್ತ ರೂ.1,65,232/– ಪಾವತಿಸಿದ್ದು, ಹೆಚ್ಚಿಗೆ ಪಾವತಿಸಿರುವುದಿಲ್ಲ. ಸಾಂತವೇರಿ ಬೈಪಾಸ್ ರಸ್ತೆಯ ಪಕ್ಕದಲ್ಲಿರುವ ಉದ್ಯಾನವನದಲ್ಲಿ ನೀರು ಕಾಲುವೆ ನಿರ್ಮಾಣ ಕಾಮಗಾರಿಗೆ ರೂ.1,50,000/– ಗಳಿಗೆ ಅಂದಾಜು ಪಟ್ಟಿಯಿದ್ದು, ಕೂಲಿ ಮೊತ್ತ ರೂ.86,335/– ಮತ್ತು ಸಾಮಾಗ್ರಿ ಮೊತ್ತ ರೂ.51,400/– ಖರ್ಚಾಗಿದ್ದು, ಅಂದಾಜು ಪಟ್ಟಿಗಿಂತ ಹೆಚ್ಚಿಗೆ ಪಾವತಿಯಾಗಿರುವುದಿಲ್ಲ. ಸಂತವೇರಿ ಗ್ರಾಮದಲ್ಲಿ ಮಳೆಗಾಲದಲ್ಲಿ ಕೃಷಿ ಅರಣ್ಯ ವಿಸ್ತರಣೆ ಸಸಿ ಬೆಳೆಸುವ ಕಾಮಗಾರಿಗೆ ರೂ.46,875/– ಖರ್ಚಾಗಿದ್ದು, ಎಂ.ಬಿ.ಪುಸ್ತಕದಲ್ಲಿ ರೂ.41,148/– ಇದ್ದು, ರೂ.5,027/– ಗಳನ್ನು ಗಿಡಗಳಿಗೆ ಕೋಲು ಮತ್ತು ದಾರಕ್ಕೆ ವೆಚ್ಚವಾಗಿರುತ್ತದೆ. ಸಂತವೇರಿ ಆರೋಗ್ಯ ಕೇಂದ್ರ ಮತ್ತು ಅಂಗನವಾಡಿ ಕೇಂದ್ರದ ಹತ್ತಿರ ಸಮುದಾಯ ಅರಣ್ಯೀಕರಣ ಕಾಮಗಾರಿಗೆ ರೂ.55,000/– ಕ್ಕೆ ಅಂದಾಜು ಪಟ್ಟಿಯಿದ್ದು, ರೂ.52,700/– ಪಾವತಿಯಾಗಿರುತ್ತದೆ. ಕಾಮಗಾರಿ ಸ್ಥಳದಲ್ಲಿ ತಂತಿಬೇಲಿಯಿಲ್ಲದ ಕಾರಣ ಗಿಡಗಳನ್ನು ಜಾನುವಾರುಗಳು ಹಾಳು ಮಾಡಿರುತ್ತವೆ. ಕಾಮಗಾರಿ ಕಳಪೆಯಾಗಿರುವುದಿಲ್ಲ. ಸಂತವೇರಿ ಚಿಕ್ಕಮಗಳೂರು ರಸ್ತೆಯ ಚೌಕದಲ್ಲಿರುವ ಉದ್ಯಾನವನ ಹಿಂದೂ ಸ್ಮಶಾನದಲ್ಲಿ ಸಮುದಾಯ ಅರಣ್ಯೀಕರಣ ಕಾಮಗಾರಿಯ ಅಂದಾಜು ಮೊತ್ತ ರೂ.1,02,800/– ಇದ್ದು, ರೂ.42,500/– ವಾಚ್ ಚಾರ್ಜಸ್, ವಾರ್ಡ್ ಚಾರ್ಜಸ್ ರೂ.26,920/–, ಮೇಟ್ ಚಾರ್ಜಸ್ ರೂ.11,986/– ಆಗಿದ್ದು ಹೆಚ್ಚಿಗೆ ಪಾವತಿ ಮಾಡಿರುವುದಿಲ್ಲ. ಪಾರ್ವತಮ್ಮ ಮನೆಯಿಂದ ಎಸ್ಟೇಟ್ ಬೇಲಿವರೆಗೆ ಪೈಪ್‌ಲೈನ್ ನಿರ್ಮಾಣ ಕಾಮಗಾರಿಗೆ ರೂ.15,000/– ಕ್ಕೆ ಅಂದಾಜು ಪಟ್ಟಿಯಿದ್ದು, ಬಿಲ್ ಮೊತ್ತ ರೂ.14.850/–

ಆಗಿದ್ದು, ಉಪಕರ ರೂ.921/– ಆಗಿದ್ದು, ರೂ.14,650/– ಪಾವತಿಸಲಾಗಿರುತ್ತದೆ. ವರ್ಕ್‌ಶಾಪ್‌ನಿಂದ ಮಂಜು ಮನೆವರೆಗೆ ಪೈಪ್‌ಲೈನ್ ನಿರ್ಮಾಣ ಕಾಮಗಾರಿಗೆ ರೂ.60,000/– ಕ್ಕೆ ಅಂದಾಜು ಪಟ್ಟಿಯಿದ್ದು, ರೂ.59,942/– ನ್ನು ಪಾವತಿಸಲಾಗಿದೆ. ಕಾಮಗಾರಿ ಉತ್ತಮವಾಗಿರುತ್ತದೆ. ಪುಟ್ಟರಾಜು ಮನೆ ಹತ್ತಿರ ಹಾಗೂ ಉದ್ಯಾನವನ ಪಕ್ಕದಲ್ಲಿ ಸಿಸ್ಟರ್ನ್ ಅಳವಡಿಸುವ ಕಾಮಗಾರಿಗೆ ರೂ.65,000/– ಕ್ಕೆ ಅಂದಾಜು ಪಟ್ಟಿಯಿದ್ದು, ಕಾಮಗಾರಿಗೆ ರೂ.60,535/– ಹಾಗೂ ಉಪಕರ ರೂ.4,142/– ಒಟ್ಟು 64,877/– ನ್ನು ಪಾವತಿಸಲಾಗಿದೆ. ಅಂಬೇಡ್ಕರ್ ನಗರಕ್ಕೆ ವಿದ್ಯುತ್ ಸಂಪರ್ಕ ಕಾಮಗಾರಿಗೆ ರೂ.41,913/–ಕ್ಕೆ ಅಂದಾಜು ಪಟ್ಟಿ ನೀಡಿದ್ದು, ಅದರಂತೆ ರೂ.41,913/– ಪಾವತಿಸಲಾಗಿರುತ್ತದೆಯೆಂದು ಹೇಳಿರುತ್ತಾರೆ.

7. ಸಾಂತವೇರಿ ಗ್ರಾಮದಲ್ಲಿ ಸಂತೆಕಟ್ಟೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬಿಲ್ಲನ್ನು ಪರಿಶೀಲಿಸಿದಾಗ, ಒಟ್ಟು ಬಿಲ್ ಮೊತ್ತ ರೂ.34,991/– ಆಗಿದ್ದು, ಆ ಪೈಕಿ ರೂ.2,649/– ತೆರಿಗೆಯನ್ನು ಕಟಾಯಿಸಿ ರೂ.32,142/– ಕ್ಕೆ ಚೆಕ್ ನೀಡಿರುವುದು ಕಂಡುಬರುತ್ತದೆ.

8. ಸಾಂತವೇರಿ ಗ್ರಾಮದ ಧೋಬಿಹಳ್ಳದ ಕೆರೆಯ ರಿವಿಟ್‌ಮೆಂಟ್ ಹಾಗೂ ಅಭಿವೃದ್ಧಿ ಕಾಮಗಾರಿಯ ರಿವಿಟ್‌ಮೆಂಟ್ 2.5 ಮೀ. ಎತ್ತರವಿದ್ದು, ಆ ಕಾಮಗಾರಿಗೆ ರೂ.1,27,875/– ನ್ನು ಉಪಯೋಗಿಸಿದ್ದು, ಎನ್.ಎಂ.ಆರ್. ಪರಿಶೀಲಿಸಲಾಗಿ ರೂ.35,191/– ಗಳ ವ್ಯತ್ಯಾಸ ಕಂಡುಬಂದಿರುತ್ತದೆಯೆಂದು ಹೇಳಿದ್ದು, ಸದರಿ ವ್ಯತ್ಯಾಸದ ಬಗ್ಗೆ ಎದುರುದಾರರು ತೃಪ್ತಿಕರವಾದ ವಿವರಣೆಯನ್ನು ನೀಡಿರುವುದಿಲ್ಲ ಮತ್ತು ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ತನಿಖಾಧಿಕಾರಿ ಹಾಜರು ಪಡಿಸಿರುವ ಅಳತೆ ಪುಸ್ತಕದ ಪ್ರತಿಯನ್ನು ಪರಿಶೀಲಿಸಿದಾಗ, ಅಂದಾಜು ಪಟ್ಟಿಯ ಕಾಲಂ ನಂ.1 ರ ಕಾಮಗಾರಿಯನ್ನು ಮಾಡಿರುವ ಬಗ್ಗೆ ಅಳತೆ ಪುಸ್ತಕದಲ್ಲಿ ಯಾವುದೇ ನಮೂದು ಕಂಡುಬರುತ್ತಿಲ್ಲ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಎಷ್ಟು ಮೊತ್ತಕ್ಕೆ ಬಿಲ್ ತಯಾರಿಸಲಾಗಿದೆಯೆನ್ನುವ ಬಗ್ಗೆ ಎದುರುದಾರರು ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ.

9. ಸಾಂತವೇರಿ ಬೈಪಾಸ್ ರಸ್ತೆಯ ಪಕ್ಕದಲ್ಲಿರುವ ಉದ್ಯಾನವನದಲ್ಲಿ ನೀರು ಕಾಲುವೆ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ತನಿಖಾಧಿಕಾರಿ ಹಾಜರು ಪಡಿಸಿರುವ ಅಳತೆ ಪುಸ್ತಕದ ನಕಲನ್ನು ಪರಿಶೀಲಿಸಿದಾಗ, ಕಾಮಗಾರಿ ನಡೆದ ದಿನಾಂಕದಂದು ಅಳತೆ ಪುಸ್ತಕದಲ್ಲಿ ನಮೂದು ಮಾಡಿರುವುದು ಕಂಡುಬರುತ್ತಿಲ್ಲ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಆಗಿರು ಖರ್ಚಿನ ಬಗ್ಗೆ ದಾಖಲಾತಿ ಮತ್ತು ಅದು ಎಷ್ಟು ಮೊತ್ತಕ್ಕೆ ಬಿಲ್ ಮಾಡಲಾಗಿದೆಯೆನ್ನುವ ಬಗ್ಗೆ ಎದುರುದಾರರು ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ.

10. ಸಾಂತವೇರಿ ಗ್ರಾಮದಲ್ಲಿ ಮಳೆಗಾಲದಲ್ಲಿ ಕೃಷಿ ಅರಣ್ಯ ವಿಸ್ತರಣೆ ಸಸಿ ಬೆಳೆಸುವ ಕಾಮಗಾರಿ, ಆರೋಗ್ಯ ಕೇಂದ್ರ ಮತ್ತು ಅಂಗನವಾಡಿ ಕೇಂದ್ರದ ಹತ್ತಿರ ಸಮುದಾಯ ಅರಣ್ಯೀಕರಣ ಕಾಮಗಾರಿ, ಸ್ಮಶಾನದಲ್ಲಿ ಸಮುದಾಯ ಅರಣ್ಯೀಕರಣ ಕಾಮಗಾರಿ, ಪಾರ್ವತಮ್ಮನ ಮನೆಯಿಂದ ಎಸ್ಟೇಟ್ ಬೇಲಿವರೆಗೆ ಪೈಪ್‌ಲೈನ್ ಅಳವಡಿಸುವ ಕಾಮಗಾರಿ, ವರ್ಕ್‌ಶಾಪ್‌ನಿಂದ ಮಂಜು ಮನೆವರೆಗೆ ಪೈಪ್‌ಲೈನ್ ನಿರ್ಮಾಣ, ಪುಟ್ಟರಾಜು ಮನೆಯ ಹತ್ತಿರ ಹಾಗೂ ಉದ್ಯಾನವನ ಪಕ್ಕದಲ್ಲಿ ಸಿಸ್ಟರ್ನ್ ಅಳವಡಿಸುವುದು ಮತ್ತು ಅಂಬೇಡ್ಕರ್ ನಗರಕ್ಕೆ ವಿದ್ಯುತ್ ಸಂಪರ್ಕ ಒದಗಿಸುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಂದಾಜು ಪಟ್ಟಿ ಮತ್ತು ಎಷ್ಟು ಮೊತ್ತಕ್ಕೆ ಬಿಲ್ ಪಾವತಿಸಲಾಗಿದೆ ಎನ್ನುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಎದುರುದಾರರು ಹಾಜರು ಪಡಿಸಿರುವುದಿಲ್ಲ.

11. ಎದುರುದಾರರು ತನ್ನ ಆಕ್ಷೇಪಣೆಯೊಂದಿಗೆ ತನಿಖಾಧಿಕಾರಿ ವರದಿಯಲ್ಲಿ ಉಲ್ಲೇಖಿಸಿರುವ ವ್ಯತ್ಯಾಸದ ಮೊತ್ತಗಳಿಗೆ ಸಂಬಂಧಿಸಿದಂತೆ ಬಿಲ್ ಪ್ರತಿಗಳನ್ನು ಹಾಜರು ಪಡಿಸದೆ ಇರುವುದರಿಂದ ಎದುರುದಾರರ ಆಕ್ಷೇಪಣೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ, ತನಿಖಾಧಿಕಾರಿಯ ವರದಿಯನ್ನು ಅಲ್ಲಗಳೆಯಲು ಯಾವುದೇ ಸಾಕ್ಷ್ಯಾಧಾರಗಳಿಲ್ಲ.

12. ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, 11 ಕಾಮಗಾರಿಗಳಲ್ಲಿ ಒಟ್ಟು ರೂ.56,555/- ವ್ಯತ್ಯಾಸ ಕಂಡುಬರುತ್ತಿದ್ದು, ಕೆಲವು ಕಾಮಗಾರಿಗಳಲ್ಲಿ ಅಂದಾಜು ಮೊತ್ತಕ್ಕಿಂತ ಹೆಚ್ಚು ಖರ್ಚು ಮಾಡಿರುವುದು ಕಂಡುಬಂದಿರುತ್ತದೆ. ಆದ್ದರಿಂದ, ಆ ಬಗ್ಗೆ ವಿಚಾರಣೆ ನಡೆಸಿ ಮೊತ್ತವನ್ನು ವಸೂಲು ಮಾಡಲು ಕ್ರಮ ಕೈಗೊಳ್ಳಬೇಕಾಗುತ್ತದೆ. ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ, ಎದುರುದಾರರು ಅಧಿಕಾರ ದುರುಪಯೋಗ ಮತ್ತು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಆದ್ದರಿಂದ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯಸ್ಥರಾಗಿರುತ್ತಾರೆ.

13. 2ನೇ ಎದುರುದಾರರಾದ ಶ್ರೀಮತಿ.ದಿವ್ಯ ಜ್ಯೋತಿ ಬಿ, ಇವರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ನಿಯಮಗಳನ್ನು ಉಲ್ಲಂಘಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ, 2ನೇ ಎದುರುದಾರರ ವಿರುದ್ಧ ವಿಚಾರಣೆ

ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

14. 1ನೇ ಎದುರುದಾರರಾದ ಶ್ರೀ.ದೇವರಾಜು ಇವರು ಜನಪ್ರತಿನಿಧಿಯಾಗಿದ್ದು, ಅವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 43ಎ ರನ್ವಯ ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡಿದೆ.

15. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಎನ್.ಆನಂದ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.